**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.35/2024**

**ಫಿರ್ಯಾದುದಾರರುಃ** ಸರ್ಕಾರ (ಕರ್ನಾಟಕ ಅಬಕಾರಿ ಇಲಾಖೆ ), ಹುಣಸೂರು ಉಪವಲಯ, ಹುಣಸೂರು, ಮೈಸೂರು ಜಿಲ್ಲೆ.

**- ವಿರುದ್ಧ -**

**ಆರೋಪಿತನುಃ** ಸತೀಶ ಯಾನೆ ಸತೀಶಗೌಡ, ಬಿನ್ ಸ್ವಾಮಿಗೌಡ., 36 ವರ್ಷ, ವಾಸಃ ಮೈಲಾಂಬೂರು ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿಯಿತು |
| ಪ್ರಶ್ನೆ 2: | ಪಿ.ಡಬ್ಲ್ಯು-3 ರಾಘವೇಂದ್ರ.ಸಿ.ವಿ., ಹುಣಸೂರು ಅಬಕಾರಿ ಮುಖ್ಯಪೇದೆಯವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 01.05.2023ರಂದು ರಾಜ್ಯ ವಿಧಾನಸಭಾ ಚುನಾವಣೆಯ ಸಲುವಾಗಿ ಜಾರಿಯಲ್ಲಿದ್ದ ಮಾದರಿ ನೀತಿ ಸಂಹಿತೆಯ ತರುವಾಯ ಅವರು, ಚಾಸಾ.4 ಮತ್ತು ಚಾಸಾ.5ರವರೊಂದಿಗೆ ಇಲಾಖಾ ವಾಹನದಲ್ಲಿ ರಾತ್ರಿ 9 ಗಂಟೆಯಲ್ಲಿ ಕಚೇರಿಯಿಂದ ಹೊರಟು, ಹುಣಸೂರು ನಗರ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯ ಮಾಡುತ್ತಾ, ಹುಣಸೂರು - ಕೆ.ಆರ್.ನಗರ ಮುಖ್ಯ ರಸ್ತೆಯಲ್ಲಿರುವ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವಲ್ಲಿಗೆ ರಸ್ತೆಗಾವಲು ನಡೆಸುತ್ತಾ, ರಾತ್ರಿ 9.20ಕ್ಕೆ ತಲುಪಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆ ಸ್ಥಳದಲ್ಲಿ ರಸ್ತೆಗಾವಲು ನಡೆಸುತ್ತಿದ್ದಾಗ ಹುಣಸೂರು ಪಟ್ಟಣ ಕಡೆಯಿಂದ ರಾತ್ರಿ 9.30ರ ಸಮಯದಲ್ಲಿ ಒಂದು ದ್ವಿಚಕ್ರ ವಾಹನವು ಬರುತ್ತಿರುವುದು ಕಂಡುಬಂದಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಸದರಿ ವಾಹನದ ಸವಾರನಾದ ನಿಮ್ಮ ಬಳಿ ಅದರಲ್ಲಿ ಏನಿದೆ ಎಂದು ಕೇಳಿದಾಗ ನೀವು ಯಾವುದೇ ಉತ್ತರವನ್ನು ನೀಡಲಿಲ್ಲ ಎಂದು ಹೇಳಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ಚೀಲ ಮತ್ತು ದ್ವಿಚಕ್ರ ವಾಹನವನ್ನು ಶೋಧಿಸಲು ಬೇರೆ ದ್ವಿಚಕ್ರ ವಾಹನದಲ್ಲಿ ಅದೇ ರಸ್ತೆಯಲ್ಲಿ ಹೋಗುತ್ತಿದ್ದ ಚಾಸಾ.1ಸುರೇಶ್ ಮತ್ತು ಚಾಸಾ.2ಮಹದೇವಗೌಡ ರವರನ್ನು ತಡೆದು ಅವರಿಗೆ ವಿಚಾರ ತಿಳಿಸಿ ಪಂಚರಾಗಿ ಸಹಕರಿಸಬೇಕೆಂದು ಕೋರಲಾಗಿ ಅವರಿಬ್ಬರು ಒಪ್ಪಿಕೊಂಡ ಮೇರೆಗೆ ನೋಟೀಸ್ ನ್ನು ಜಾರಿ ಮಾಡಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಸಿಬ್ಬಂದಿಗಳು ಪರಸ್ಪರ ಅಂಗಶೋಧನೆಯನ್ನು ಮಾಡಿಕೊಂಡು, ಪಂಚರ ಸಮಕ್ಷಮ ಸದರಿ ಬಿಳಿ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಮದ್ಯದ ಟೆಟ್ರಾಪ್ಯಾಕ್ ಗಳು ಕಂಡುಬಂದಿದ್ದು, ಅವುಗಳನ್ನು ನೆಲಕ್ಕೆ ಸುರಿದು ಎಣಿಕೆ ಮಾಡಿದಾಗ ತಲಾ 90 ಎಂ ಎಲ್ ನ ಒಟ್ಟು 50 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಆಗಿದ್ದು, ಅದರಲ್ಲಿ ಒಟ್ಟು 4.500 ಲೀಟರ್ ಮದ್ಯ ಇರುವುದು ಕಂಡುಬಂದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ನಿಮ್ಮ ಬಳಿ ಸದರಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಲು ಪರವಾನಿಗೆ ವಗೈರೆ ಇದೆಯೇ ಎಂದು ಕೇಳಿದಾಗ ನೀವು ಯಾವುದು ಇಲ್ಲ ಎಂದು ತಿಳಿಸಿದ್ದು, ಸದರಿ ದ್ವಿಚಕ್ರ ವಾಹನವನ್ನು ಪರಿಶೀಲಿಸಿದಾಗ ಅದರ ನೋಂದಣಿ ಸಂಃ ಕೆಎ-45/ಹೆಚ್-8410 ರ ಹೀರೋ ಹೊಂಡಾ ಸ್ಲೆಂಡರ್ ಪ್ಲಸ್ ನ ಕಪ್ಪು ಮತ್ತು ನೀಲಿ ಮಿಶ್ರಿತ ಬಣ್ಣದ ಬೈಕ್ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುವುದು ಅಬಕಾರಿ ಕಾಯಿದೆಯ ಉಲ್ಲಂಘನೆಯಾಗಿರುವುದರಿಂದ ನಿಮ್ಮ ಹೆಸರು, ವಿಳಾಸ ಕೇಳಲಾಗಿ ಸತೀಶ ಬಿನ್ ಸ್ವಾಮೀಗೌಡ, ಮೈಲಾಂಬೂರು ಗ್ರಾಮ, ಹುಣಸೂರು ತಾಲ್ಲೂಕಕು ಎಂದು ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ.5ಡಿ.ಟಿ.ಜಯಂತಿರವರು ನಿಮಗೆ ಸ್ಥಳದಲ್ಲಿ ನೋಟೀಸ್ ನ್ನು ನೀಡಿ, ತನಿಖೆಗೆ ಸಹಕರಿಸಬೇಕೆಂದು ಹೇಳಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ತದ ನಂತರ ದೊರೆತ ಮದ್ಯದಲ್ಲಿ ತಲಾ 90 ಎಂ.ಎಲ್ ನ ಒಟ್ಟು 30 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಇಲಾಖಾ ಮೊಹರು ಸಂಃ 310 ರಿಂದ ಮುದ್ರೆ ಮಾಡಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಮೊಕದ್ದಮೆಯ ವಿವರಗಳನ್ನು ಮಾದರಿ ಸೀಲಿನ ನಕಲನ್ನು ತಯಾರಿಸಲಾಗಿದ್ದು, ಚಾಸಾ.5ರವರ ಉಕ್ತಲೇಖನದಂತೆ ಅವರ ಕೈಬರಹದಲ್ಲಿ ರಾತ್ರಿ 9.30 ರಿಂದ 11.00ಗಂಟೆಯವರೆಗೆ |

| | |
|---|---|
| | ಸ್ಥಳದಲ್ಲಿ ಇಲಾಖಾ ವಾಹನದ ಬೆಳಕಿನ ಸಹಾಯದಿಂದ ಸ್ಥಳ ಮಹಜರು ಕ್ರಮವನ್ನು ಜರುಗಿಸಿ, ದ್ವಿಚಕ್ರ ವಾಹನ, ರಾಸಾಯನಿಕ ವಿಶ್ಲೇಷಣೆಗಾಗಿ ಸಂಗ್ರಹಿಸಿದ ಟೆಟ್ರಾ ಪ್ಯಾಕೇಟ್ ಗಳು ಮತ್ತು ಉಳಿದ 20 ಟೆಟ್ರಾ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದುಕೊಂಡು, ಮುದ್ದೆ ಮಾಲನ್ನು ಮತ್ತು ವಾಹನವನ್ನು ಕಚೇರಿಗೆ ತಂದು, ಚಾಸಾ.5ರವರು ಪ್ರಕರಣ ದಾಖಲಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ನಿಪಿ.1 ಮಹಜರಿನಲ್ಲಿ ಅವರ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಿ ಹಾಗು ಮಾದರಿಗಾಗಿ ಸಂಗ್ರಹಿಸಿದ ಮುದ್ದೆಮಾಲನ್ನು ದಿನಾಂಕಃ 06.03.2023ರಂದು ರಾಸಾಯನಿಕ ವಿಶ್ಲೇಷಣೆಗಾಗಿ ತಾನೇ ತೆಗೆದುಕೊಂಡು ಹೋಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕಃ 23.08.2023ರಂದು ವರದಿಯನ್ನು ಸ್ವೀಕರಿಸಿ, ಚಾಸಾ.8ರವರ ಮುಂದೆ ಹಾಜರುಪಡಿಸಿರುವುದಾಗಿ ಹೇಳಿದ್ದು, ಸದರಿ ರಾಸಾಯನಿಕ ವರದಿಯನ್ನು ನಿಪಿ.6 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 12: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ಅವರು ದಿನಾಂಕಃ 08.06.2023ರಂದು ಚಾಸಾ.8ರವರ ಮುಂದೆ ಹೇಳಿಕೆ ನೀಡಿದ್ದು, ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ಮು.ಮಾ.1 ಎಂದು ಮತ್ತು ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 13: | ಪಿ.ಡಬ್ಲ್ಯೂ – 4 ನಾಗಲಿಂಗಸ್ವಾಮಿ ಇವರು ತಮ್ಮ ಸಾಕ್ಷ್ಯದಲ್ಲಿ, ಹುಣಸೂರು ಉಪವಿಭಾಗದ ಅಬಕಾರಿ ನೀರಿಕ್ಷಕರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 01.05.2023ರಂದು ಹುಣಸೂರು – ಕೆ.ಆರ್.ನಗರ ಮುಖ್ಯ ರಸ್ತೆಯಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ಸರಹದ್ದು ಮುಕ್ತಾಯ ಎಂಬ ನಾಮಫಲಕ ಇರುವ ಬೋರ್ಡ್ ಮುಂಭಾಗ ರಾತ್ರಿ 9.20ಕ್ಕೆ ಸಿಬ್ಬಂದಿಗಳಾದ ಚಾಸಾ.3 ಮತ್ತು ಚಾಸಾ.4ರವರೊಂದಿಗೆ ರಸ್ತೆಗಾವಲು ನಡೆಸುತ್ತಿದ್ದಾಗ, ರಾತ್ರಿ 9.30ಕ್ಕೆ ಹುಣಸೂರು ಪಟ್ಟಣದ ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ವಾಹನಕ್ಕೆ ಕೈ ತೋರಿಸಿ ನಿಲ್ಲಿಸುವಂತೆ ಸೂಚಿಸಿದಾಗ ಅದರ ಸವಾರನಾದ ನೀವು ವಾಹನವನ್ನು ನಿಲ್ಲಿಸಿದ್ದು, ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ನಿಮ್ಮನ್ನು ಕೇಳಿದಾಗ, ನೀವು ಯಾವುದೇ ಉತ್ತರವನ್ನು ನೀಡದೇ ತಡವರಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 15: | ಇದೇ ಸಾಕ್ಷಿಯು ಮುಂದುವರೆದು, ನಂತರ ಅವರಿಗೆ ಅನುಮಾನ ಬಂದು ಸದರಿ ಪ್ಲಾಸ್ಟಿಕ್ ಚೀಲವನ್ನು ಹಾಗೂ ವಾಹನವನ್ನು ಶೋಧನೆ ಮಾಡಲು ಅದೇ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಅವರಿಗೆ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿದಾಗ ಅವರಿಬ್ಬರು ಒಪ್ಪಿ ಮುಂದೆ ಬಂದಿದ್ದರಿಂದ ಅವರಿಗೆ ನೋಟೀಸ್ ನೀಡಿ, ಸಹಿ ಪಡೆದುಕೊಂಡಿರುವುದಾಗಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ವಾಹನವನ್ನು ಶೋಧನೆ ನಡೆಸಲು ನ್ಯಾಯಾಲಯದಿಂದ ಶೋಧನಾ ವಾರೆಂಟನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಅಬಕಾರಿ ಕಾಯಿದೆ ಕಲಂ.54ರಡಿಯಲ್ಲಿ ಕಾರಣಗಳನ್ನು ನಮೂದಿಸಿ ಸ್ಥಳದಲ್ಲಿಯೇ ಶೋಧನಾ ಸ್ಥಳದಲ್ಲಿಯೇ ತಯಾರಿಸಿ, ಪಂಚರ ಸಮಕ್ಷಮ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಕಂಡುಬಂದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ17: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವುಗಳನ್ನು ನೆಲದ ಮೇಲೆ ಸುರಿದು ಎಣಿಕೆ ಮಾಡಿದಾಗ ಅವುಗಳ ಮೇಲೆ ಅಬಕಾರಿ ಭದ್ರತಾ ಚೀಟಿ ಸಂಖ್ಯೆಗಳು ಕಂಡುಬರದೆ ಇದ್ದು, ತಲಾ 90 ಎಮ್.ಎಲ್. ನ ಒಟ್ಟು 50 ಓರಿಜಿಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕ್ ಗಳು ಇದ್ದು, ಅವುಗಳಲ್ಲಿ ಒಟ್ಟು 4.500 ಲೀಟರ್ ಮದ್ಯ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ18: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ವಾಹನವನ್ನು ಪರಿಶೀಲಿಸಲಾಗಿ ಕಪ್ಪು ಮತ್ತು ನೀಲಿ ಬಣ್ಣ ಮಿಶ್ರಿತ ಹೀರೋ ಹೊಂಡಾ ಸ್ಪೆಂಡರ್ ಪ್ಲಸ್ ನೋಂದಣಿ ಸಂಃ ಕೆಎ–45/ಹೆಚ್–8410 ಆಗಿದ್ದು, ಈ ಬಗ್ಗೆ ಸದರಿ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಲು ಯಾವುದಾದರೂ ಲೈಸೆನ್ಸ್ ರಹದಾರಿ ವಗೈರೆ ಇದೆಯೇ ಎಂದು ನಿಮ್ಮನ್ನು ಕೇಳಲಾಗಿ ಯಾವುದು ಇಲ್ಲ ಎಂದು ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 19: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ನಿಮ್ಮ ಹೆಸರು ವಿಳಾಸ ಕೇಳಲಾಗಿ ನೀವು ಸತೀಶ್ ಬಿನ್ ಸ್ವಾಮಿಗೌಡ, 36 ವರ್ಷ, ಮೈಲಾಂಬರೂ ಗ್ರಾಮ, ಹುಣಸೂರು ತಾಲ್ಲೂಕು ವಾಸಿ ಎಂದು ತಿಳಿಸಿದ್ದು, ಮದ್ಯವನ್ನು ಅಕ್ರಮವಾಗಿ ಹೊಂದಿರುವುದು ಅಬಕಾರಿ ಕಾಯಿದೆಯ ಉಲ್ಲಂಘನೆ ಎಂದು ನಿಮಗೆ ತಿಳಿಸಿ, ಸ್ಥಳದಲ್ಲಿಯೇ ನಿಮಗೆ ನೋಟೀಸ್ ಜಾರಿ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 20: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸ್ಥಳದಲ್ಲಿ ದೊರೆತ ಎಲ್ಲಾ ಮದ್ಯದ ಟೆಟ್ರಾಪ್ಯಾಕ್ ಗಳನ್ನು ವಶಕ್ಕೆ ಪಡೆದುಕೊಂಡು ಆ ಪೈಕಿ 30 ಒರಿಜಿನಲ್ ಚಾಯ್ಸ್ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ದಾರದಿಂದ ಕಟ್ಟಿ ಅರಗಿನಿಂದ 310 ಎಂದು ಸೀಲು ಮಾಡಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 21: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ಸ್ಥಳದಲ್ಲಿ ರಾತ್ರಿ 9.30 ರಿಂದ 11.0 ಗಂಟೆಯವರೆಗೆ ಮಹಜರು ಕ್ರಮವನ್ನು ಜರುಗಿಸಿದ್ದು, ನಿಮ್ಮನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 22: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.1ರ ಪಂಚನಾಮೆಗೆ ಅವರು, ಚಾಸಾ.1 ರಿಂದ 4ರವರು ಸಹಿ ಮಾಡಿದ್ದು, ಅದರಲ್ಲಿರುವ ಅವರ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಿದ್ದು, ಮಹಜರ್ ಕ್ರಮವನ್ನು ಜರುಗಿಸುವ |

| | |
|---|---|
| | ದಿನ ಮಾದರಿಗಾಗಿ ಸಂಗ್ರಹಿಸಿದ ಮದ್ಯದ ಟೆಟ್ರಾಪ್ಯಾಕ್ ಗಳನ್ನು ನೋಡಿ ಮು.ಮಾ.1 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 23: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.2 ರ ಶೋಧನಾ ಸಮುಚಿತ ಆಧಾರದಲ್ಲಿ ಅವರ ಸಹಿಯನ್ನು ನಿಪಿ.2(ಸಿ) ಎಂದು ಮತ್ತು ನಿಪಿ.3ರ ಮಾದರಿ ಸೀಲಿನ ನಕಲಿನಲ್ಲಿ ಅವರ ಸಹಿಯನ್ನು ನಿಪಿ.(ಸಿ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 24: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.41(ಎ) ರಡಿಯಲ್ಲಿ ನೀಡಿದ ನೋಟೀಸನ್ನು ನೋಡಿ ನಿಪಿ.7 ಎಂದು ಮತ್ತು ಅದರಲ್ಲಿ ಅವರ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಿದ್ದು, ನಂತರ ಕಚೇರಿಗೆ ವಾಪಸ್ಸಾಗಿ ಅವರ ಸ್ವ ದೂರಿನ ಮೇರೆಗೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಸ್ವ ದೂರನ್ನು ನಿಪಿ.8 ಎಂದು ಮತ್ತು ಅದರಲ್ಲಿ ಅವರ ಸಹಿಯನ್ನು ನಿಪಿ.8(ಎ) ಹಾಗೂ ಪ್ರಥಮ ವರ್ತಮಾನ ವರದಿಯನ್ನು ನಿಪಿ.8 ಎಂದು ಮತ್ತು ಅದರಲ್ಲಿ ಅವರ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 25: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬಿಳಿ ಬಣ್ಣದ ಚೀಲವನ್ನು ಮು.ಮಾ.2 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 26: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ತನಿಖೆಯ ಸಮಯದಲ್ಲಿ ಮಾದರಿಗಾಗಿ ಸಂಗ್ರಹಿಸಿ ಉಳಿದ ಮುದ್ದೆಮಾಲನ್ನು ಇಲಾಖೆಯ |

| | |
|---|---|
| | ವಶದಲ್ಲಿ ಇಟ್ಟುಕೊಳ್ಳಲು ಅನುಮತಿ ಕೋರಿ ಪ್ರಾಧಿಕೃತ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ, ಅವರಿಂದ ಅನುಮತಿಯನು ಪಡೆದುಕೊಂಡಿದ್ದು, ಸದರಿ ಮನವಿಯನ್ನು ನಿಪಿ.10 ಎಂದು ಮತ್ತು ಅದರಲ್ಲಿ ಅವರ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ27: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಜಪ್ತಿ ಮಾಡಿದ 4 ಭಾವಚಿತ್ರಗಳಿರುವ ಆರೋಪಿಯಾದ ನಿಮಗೆ ಸೇರಿದ ವಾಹನವನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಒಟ್ಟಾಗಿ ನಿಪಿ.11 ಎಂದು ಮತ್ತು ಅದಕ್ಕೆ ಸಂಬಂಧಿಸಿದ ಸಿಡಿಯನ್ನು ನಿಪಿ.12 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ28: | ಪಿ.ಡಬ್ಲ್ಯೂ – 6 ದೇವರಾಜು, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರಿಗೆ ಗೊತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ29: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.11 ಭಾವಚಿತ್ರಗಳಲ್ಲಿರುವ ಬೈಕ್ ತನ್ನದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ30: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 01.05.2023ರಂದು ನಿಪಿ.11ರಲ್ಲಿ ಕಾಣುವ ಬೈಕನ್ನು ಆರೋಪಿಯಾದ ನಿಮಗೆ ಕೊಟ್ಟಿದ್ದು, ಆ ದಿನ ರಾತ್ರಿ 9.00 ಗಂಟೆಗೆ ನೀವು ನಿಮ್ಮ ಮನೆಯ ಹತ್ತಿರ ಬಂದು ಮೈಲಾಂಬೂರಿಗೆ ಹೋಗಲು ಬಸ್ಸು ಇಲ್ಲ, ಬೈಕ್ ಕೊಡಿ ಬೆಳಿಗ್ಗೆ ವಾಪಸ್ಸು ತಂದು ಕೊಡುತ್ತೇನೆ ಎಂದು ಹೇಳಿ ಅವರ ಬೈಕನ್ನು ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 31: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ಬೈಕ್ ನಂ.ಕೆಎ-48/ಹೆಚ್-8410 ಆಗಿದ್ದು, ಅದು ಹೀರೊ ಹೋಂಡಾ ಕಂಪನಿಗೆ ಸೇರಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 32: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 28.07.2023ರಂದು ಚಾಸಾ.8ರವರು ಅವರಿಗೆ ಕರೆ ಮಾಡಿ ಅವರ ಬೈಕನ್ನು ನೀವು ಮದ್ಯ ಸಾಗಾಣಿಕೆ ಮಾಡಲು ತೆಗೆದುಕೊಂಡು ಹೋಗಿ ಸಿಕ್ಕಿ ಬಿದ್ದಿದ್ದಾರೆ ಎಂದು ವಿಷಯ ತಿಳಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 33: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಅಬಕಾರಿ ಕಚೇರಿಗೆ ಹೋಗಿದ್ದು, ಬೈಕ್ ಅವರಿಗೆ ಸೇರಿದ್ದು ಎಂದು ಹೇಳಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 34: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರ ವಾಹನವನ್ನು ಆರೋಪಿಯಾದ ನಿಮಗೆ ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ35: | ಪಿ.ಡಬ್ಲ್ಯೂ - 5 ಡಿ.ಜಯಂತಿ., ಹುಣಸೂರು ಅಬಕಾರಿ ವಲಯದ ಉಪ ನೀರಿಕ್ಷಕಿಯವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 02.05.2023ರಂದು ಈ ಪ್ರಕರಣದ ಕಡತವನ್ನು ಚಾಸಾ.5ನಾಗಲಿಂಗಸ್ವಾಮಿರವರಿಂದ ಪಡೆದು, ಮುಂದಿನ ತನಿಖೆಗಾಗಿ ಕಡತವನ್ನು ಪರಿಶೀಲಿಸಿ, ಸದರಿ ಕಡತದೊಂದಿಗೆ ಮುದ್ದೆಮಾಲು ಹಾಗೂ |

| | |
|---|---|
| | ಜಪ್ತು ಮಾಡಿಕೊಂಡ ವಾಹನವನ್ನು ಸ್ವೀಕರಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 36: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 06.05.2023ರಂದು ಮಾದರಿಗಾಗಿ ತೆಗೆದ ಮುದ್ದೆಮಾಲನ್ನು ರಾಸಾಯನಿಕ ವಿಶ್ಲೇಪಣಾ ವರದಿ ನೀಡುವಂತೆ ಕೋರಿ, ಮನವಿ ಪತ್ರ, ಪ್ರಥಮ ವರ್ತಮಾನ ವರದಿ ಮತ್ತು ಮಹಜರಿನೊಂದಿಗೆ ಚಾಸಾ.3ರವರ ಮೂಲಕ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರಿಗೆ ಕಳುಹಿಸಿಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಪ್ರಶ್ನೆ 37: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15.05.2023ರಂದು ಪ್ರಕರಣದಲ್ಲಿ ಜಪ್ತು ಪಡಿಸಿದ ವಾಹನ ಸಂಃ ಕೆಎ-45/ಹೆಚ್-8410ರ ದ್ವಿಚಕ್ರ ವಾಹನದ ಬಿ-ಎಕ್ಸ್ ಟ್ರ್ಯಾಕ್ಟ್ ಕೋರಿ ಆರ್.ಟಿ.ಓ., ಹುಣಸೂರು ಇವರಿಗೆ ಮನವಿ ಸಲ್ಲಿಸಿದ್ದು, ನಂತರ ದಿನಾಂಕಃ 16.05.2023ರಂದು ಆರ್.ಟಿ.ಓ. ಹುಣಸೂರು ಇವರು ಜಪ್ತುಪಡಿಸಿದ ವಾಹನದ ಬಿ-ಎಕ್ಸ್ ಟ್ರ್ಯಾಕ್ಟ್ ಅನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 38: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರ್.ಟಿ.ಓ. ಹುಣಸೂರು ಇವರು ನೀಡಿದ ಜಪ್ತುಪಡಿಸಿದ ವಾಹನದ ಬಿ-ಎಕ್ಸ್ ಟ್ರ್ಯಾಕ್ಟ್ ಅನ್ನು ಪರಿಶೀಲಿಸಿದಾಗ ಸದರಿ ವಾಹನ ಚಾಸಾ.7ರವರ ಹೆಸರಿನಲ್ಲಿರುವುದು ಕಂಡುಬಂದಿದ್ದು, ಅದೇ ದಿನದಂದು ಚಾಸಾ.7ರವರಿಗೆ ನೋಟೀಸ್ ಜಾರಿ ಮಾಡಲು ಸದರಿ ವಿಳಾಸಕ್ಕೆ ಹೋಗಿ ನೋಡಿದಾಗ ಅವರು ಸಿಗಲಿಲ್ಲ ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 39: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15.07.2023ರಂದು ಆರೋಪಿಯಾದ ನೀವು ಖುದ್ದು ಕಚೇರಿಗೆ ಹಾಜರಾಗಿದ್ದು ನಿಮ್ಮ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿದ್ದು, ದಿನಾಂಕಃ 07.06.2023ರಂದು ಚಾಸಾ.1 ಮತ್ತು ಚಾಸಾ.2ರವರ ಹೇಳಿಕೆಗಳನ್ನು ಮತ್ತು ದಿಃ 08.06.2023ರಂದು ಈ ಪ್ರಕರಣದ ಸಮಯದಲ್ಲಿ ಹಾಜರಿದ್ದ ಇಲಾಖಾ ಸಿಬ್ಬಂದಿಗಳಾದ ಚಾಸಾ.3 ಮತ್ತು ಚಾಸಾ4ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 40: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 21.07.2023ರಂದು ಚಾಸಾ.7ರವರಿಗೆ ನೋಟೀಸ್ ನೀಡಿದ್ದು, ನಂತರ ದಿನಾಂಕಃ 28.07.2023ರಂದು ಚಾಸಾ.7ರವರು ಅವರ ಮುಂದೆ ಹಾಜರಾಗಿ, ಆರೋಪಿಯಾದ ನೀವು ಪರಿಚಯಸ್ಥರು, ನಿಮ್ಮ ಸ್ವಂತ ಗ್ರಾಮವಾದ ಮೈಲಾಂಬೂರಿಗೆ ತೆರಳಲು ಬಸ್ ಇಲ್ಲದ ಕಾರಣ ತುರ್ತು ನಿಮಿತ್ತ ಮೈಲಾಂಬರೂ ಗ್ರಾಮಕ್ಕೆ ಹೋಗಲು ಅವರ ವಾಹನವನ್ನು ಪಡೆದುಕೊಂಡು ಹೋಗಿದ್ದಾರಿ ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 41: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 23.08.2023ರಂದು ಚಾಸಾ.3ರವರು ರಾಸಾಯನಿಕ ಪ್ರಯೋಗಾಲಯ, ಬೆಂಗಳೂರಿಗೆ ತೆರಳಿ ಎಫ್.ಎಸ್.ಎಲ್. ವರದಿಯನ್ನು ಪಡೆದು, ಅವರ ಮುಂದೆ ಹಾಜರುಪಡಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 42: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ತನಿಖೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ವಾಹನದ ಭಾವಚಿತ್ರವನ್ನು ತೆಗೆಸಿದ್ದು, ಅದಕ್ಕೆ ಸಂಬಂಧಿಸಿದ ಭಾವಚಿತ್ರ ಮತ್ತು ಸಿಡಿಯನ್ನು ಹಾಗೂ ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ರಡಿಯಲ್ಲಿ ದೃಢೀಕರಣವನ್ನು ಪಡೆದುಕೊಂಡಿದ್ದು, ನಿಮ್ಮ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ದಿನಾಂಕಃ 13.12.2023ರಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 43: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.3ರವರಿಗೆ ರಾಸಾಯನಿಕ ಪ್ರಯೋಗಾಲಯಕ್ಕೆ ಮುದ್ದೆಮಾಲನ್ನು ತೆಗೆದುಕೊಂಡು ಹೋಗಿ ವರದಿಯನ್ನು ತರುವಂತೆ ನೀಡಿದ ಮನವಿಯನ್ನು ನಿಪಿ.13 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 43: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15.05.2023ರಂದು ಆರ್.ಟಿ.ಓ. ಹುಣಸೂರು ಇವರಿಗೆ ಸಲ್ಲಿಸಿದ ಮನವಿಯನ್ನು ನಿಪಿ.14 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.14(ಎ) ಎಂದು, ತನಿಖಾ ಸಮಯದಲ್ಲಿ ವಶಪಡಿಸಿಕೊಂಡ ವಾಹನದ ಬಿ-ಎಕ್ಸ್ ಟ್ರ್ಯಾಕ್ಟ್ ನ್ನು ನಿಪಿ.15 ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.15(ಎ) ಎಂದು ಹಾಗೂ ನಿಪಿ.6 ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ.6 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.6(ಎ)ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 44: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.11 ಭಾವಚಿತ್ರ ಮತ್ತು ನಿಪಿ.12 ಸಿಡಿಯಲ್ಲಿರುವ ಅವರ ಸಹಿಗಳನ್ನು ನಿಪಿ.11(ಎ) ಮತ್ತು ನಿಪಿ.12(ಎ) ಎಂದು, ಆರೋಪಿ ಅವರ ಮುಂದೆ ನೀಡಿದ ಸ್ವ-ಇಚ್ಛಾ ಹೇಳಿಕೆಯನ್ನು ನಿಪಿ.16 ಎಂದು, ಅದರಲ್ಲಿರುವ ಅವರ ಸಹಿಯನ್ನು ನಿಪಿ.16(ಎ) ಎಂದು, ಕಲಂ.65(ಬಿ) ಅಡಿಯ ಪ್ರಮಾಣ ಪತ್ರವನ್ನು ನಿಪಿ.17 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.17(ಎ) ಎಂದು ಹಾಗೂ ಮು.ಮಾ.1 ಮತ್ತು ಮು.ಮಾ.2 ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 45: | ಪಿ.ಡಬ್ಲ್ಯೂ - 7 ಶ್ರೀನಿವಾಸ ಮೂರ್ತಿ.ಎಸ್.ಬಿ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 01.05.2023ರಂದು ಚಾಸಾ.5ರವರು ಹಾಗೂ ಸಹ ಸಿಬ್ಬಂದಿಗಳಾದ ಚಾಸಾ.3ರವರೊಂದಿಗೆ ಇಲಾಖಾ ವಾಹನ ಸಂಃ ಕೆಎ-45/ಜಿ-106ರಲ್ಲಿ ಹುಣಸೂರು ಪಟ್ಟಣದಿಂದ ಕೆ.ಆರ್.ನಗರ ಪಟ್ಟಣಕ್ಕೆ ಹೋಗುವ ರಸ್ತೆಯ ಮಧ್ಯೆ ಇರುವ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ಸರಹದ್ದು ಮುಕ್ತಾಯ ಎಂಬ ನಾಮ ಫಲಕ ಇದ್ದ ಬೋರ್ಡ್ ಮುಂಭಾಗ ರಾತ್ರಿ 9.30ಕ್ಕೆ ರಸ್ತೆ ಗಸ್ತು ನಡೆಸುತ್ತಿದ್ದಾಗ ಹುಣಸೂರು ಕಡೆಯಿಂದ ಒಂದು ದ್ವಿಚಕ್ರ ವಾಹನ ಬರುವುದು ಕಂಡುಬಂದಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 46: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ವಾಹನವನ್ನು ತಡೆದು ನಿಲ್ಲಿಸಿ ನೋಡಿದಾಗ ಸದರಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಕಂಡುಬಂದಿದ್ದು, ಅದನ್ನು ತಪಾಸಣೆ ಮಾಡಲು ಮತ್ತೊಂದು ದ್ವಿಚಕ್ರ ವಾಹನ ಬರುತ್ತಿದ್ದು, ಅದರಲ್ಲಿ ಇಬ್ಬರೂ ಆಸಾಮಿಗಳು ಇದ್ದು, ಅವರನ್ನು ತಡೆದು ನಿಲ್ಲಿಸಿ ಪಂಚರಾಗಿ ಸಹಕರಿಸಲು ಕೋರಿಕೊಂಡಾಗ ಅವರಿಬ್ಬರು ಒಪ್ಪಿ ಮುಂದೆ ಬಂದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 47: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರ ಹೆಸರು, ವಿಳಾಸ ಕೇಳಿದಾಗ ಅವರುಗಳು ತಮ್ಮ ಹೆಸರು ಸುರೇಶ ಬಿನ್ ಕರೀಗೌಡ ಮತ್ತು ಮಹದೇವಗೌಡ ಬಿನ್ ರಾಜೇಗೌಡ ಎಂದು ಹೇಳಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇದ್ದ ಕಾರಣ ಕಲಂ.54ರ ಅಡಿಯಲ್ಲಿ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ಅದಕ್ಕೆ ಸಾಕ್ಷಿದಾರರ ಸಹಿಯನ್ನು ಪಡೆಯಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 48: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪರಸ್ಪರ ಅಂಗ ಶೋಧನೆ ಮಾಡಿಕೊಂಡು, ಸದರಿ ವಾಹನವನ್ನು ಪರಿಶೀಲಿಸಲಾಗಿ ವಾಹನದ ಪೆಟ್ರೋಲ್ ಟ್ಯಾಂಕ್ ಮೇಲೆ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಗಳು ಕಂಡುಬಂದಿದ್ದು, ಅವುಗಳಲ್ಲಿ ಅಬಕಾರಿ ಭದ್ರತಾ ಚೀಟಿ ಇಲ್ಲದೇ ಇದ್ದು, ಸದರಿ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಿಗೆ ವಗೈರೆ ಇದೆಯೇ ಕೇಳಲಾಗಿ ನೀವು ಇಲ್ಲ ಎಂದು ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 49: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪ್ಲಾಸ್ಟಿಕ್ ಚೀಲದಲ್ಲಿದ್ದ ಟೆಟ್ರಾ ಪ್ಯಾಕ್ ಗಳನ್ನು ನೆಲಕ್ಕೆ ಸುರಿದು ಎಣಿಕೆ ಮಾಡಿದಾಗ ತಲಾ 90 ಎಂ ಎಲ್ ನ ಒಟ್ಟು 50 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ತುಂಬಿದ ಟೆಟ್ರಾ ಪ್ಯಾಕ್ ಇದ್ದು, ಅಕ್ರಮವಾಗಿ ಮದ್ಯವನ್ನು ಹೊಂದುವುದು ಕಾನೂನಿನ ಉಲ್ಲಂಘನೆ ಎಂದು ತಿಳಿಸಿ ನಿಮ್ಮ ಹೆಸರು, ವಿಳಾಸ ಕೇಳಿದಾಗ ನೀವು ಸತೀಶ್ ಬಿನ್ ಸ್ವಾಮಿಗೌಡ, ಮೈಲಾಂಬೂರು ಗ್ರಾಮದ ವಾಸಿ ಎಂದು ತಿಳಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 50: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಸದರಿ ವಾಹನವನ್ನು ಪರಿಶೀಲಿಸಿದಾಗ ಕಪ್ಪು ಮತುತ ನೀಲಿ ಬಣ್ಣದ ಹೀರೊ ಹೊಂಡಾ ಸ್ಪೆಂಡರ್ ಪ್ಲಸ್ ಬೈಕ್ ಸಂಃ ಕೆಎ–45/ಹೆಚ್–8410 ಆಗಿದ್ದು, ಆರೋಪಿಯಾದ ನಿಮ್ಮನ್ನು ಮತ್ತು ವಾಹನವನ್ನು ಹಾಗೂ ಮುದ್ದೆಮಾಲನ್ನು ಇಲಾಖಾ ವಶಕ್ಕೆ ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 51: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ವಶಪಡಿಸಿಕೊಂಡ ಟೆಟ್ರಾ ಪ್ಯಾಕ್ ಗಳ ಪೈಕಿ ತಲಾ 90 ಎಂ ಎಲ್ ನ ಒಟ್ಟು 30 ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಬಿಳಿ ಬಣ್ಣದ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು ಅರಗಿನಿಂದ ಇಲಾಖಾ ಮೊಹರು 310ರ ಮೊಹರು ಮಾಡಲಾಯಿತು ಎಂದು  ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 52: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅರೋಪಿಯಾದ ನಿಮಗೆ ನೋಟೀಸನ್ನು ಜಾರಿ ಮಾಡಿದ್ದು, ಈ ಬಗ್ಗೆ ಸ್ಥಳದಲ್ಲಿ ರಾತ್ರಿ 9.30 ರಿಂದ 11.00 ಗಂಟೆಯವರೆಗೆ ವಾಹನದ ಬೆಳಕು ಮೊಬೈಲ್ ಟಾರ್ಚ್ ಬೆಳಕಿನ ಸಹಾಯದಿಂದ ಮಹಜರು ಕ್ರಮ ಜರುಗಿಸಲಾಗಿದ್ದು, ಈ ಬಗ್ಗೆ ತನಿಖಾಧಿಕಾರಿಯ ಮುಂದೆ ದಿನಾಂಕಃ 08.06.2023ರಂದು ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 53: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಜರುಗಿಸಿದ ಮಹಜರ್ ನಲ್ಲಿರುವ ಅವರ ಸಹಿಯನ್ನು ನಿಪಿ.1(ಇ) ಎಂದು ಮತ್ತು ಆರೋಪಿಯನ್ನು, ಮು.ಮಾ.1 ಮತ್ತು ಮು.ಮಾ.2ನ್ನು ಹಾಗೂ ನಿಪಿ.11ರ ಭಾವಚಿತ್ರಗಳಲ್ಲಿರುವ |

| | |
|---|---|
| | ವಾಹನವನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 54: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಕಚೇರಿಗೆ ಬಂದು ಚಾಸಾ.6 ರವರು ಪ್ರಕರಣ ದಾಖಲಿಸಿದ್ದು, ನಿಪಿ.1 ಮಹಜರ್ ನಲ್ಲಿರುವ ಅವರ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಿಕೊಂಡಿದ್ದು, 4 ಭಾವಚಿತ್ರಗಳಲ್ಲಿರುವ ಬೈಕ್ ಅನ್ನು ನೋಡಿ ಗುರುತಿಸಿದ್ದು, ಮು.ಮಾ.1 ಮತ್ತು 2ಅನ್ನು ನೋಡಿ ಗುರುತಿಸಿ ಹಾಗು ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 55: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಪ್ರಶ್ನೆ 56: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇಲ್ಲ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 07.04.2026.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ANITHA Digitally signed by ANITHA
Date: 2026.04.07 18:05:24 +0530

ಆರೋಪಿಯ ಸಹಿಃ